ಇರುತ್ತೆ. ಕೆಲವರಿಗೆ ಅದು ಸರಿ ಅನ್ನಿಸದಿರಬಹುದು. ಉದಾಹರಣೆಗೆ, ನಾನು ಸಂಗೀತಗಾರನೊಬ್ಬನ ಕಥೆ ಬರೆದರೆ, ನನಗೆ ಸಾಮಾಜಿಕ ನ್ಯಾಯದ ಪ್ರಶ್ನೆ ಬರುವುದಿಲ್ಲ. ಕಲೆಯೊಳಗೆ ಅವನ ಸಾಧನೆ ಏನು ಎನ್ನುವುದು ಮುಖ್ಯವೆನ್ನಿಸುತ್ತೆ.

ಈಗ ಬರೆಯುತ್ತಿರುವ ಅನೇಕರಿಗೆ ಸರಿಯಾದ ವಿಮರ್ಶೆ ದೊರೆಯುತ್ತಿಲ್ಲ ಎಂದೂ ಅನ್ನಿಸುತ್ತೆ. ಈಗ ಹೊಸ ವಿಮರ್ಶಕರೇ ಕಾಣಿಸುತ್ತಿಲ್ಲ. 1970ರವರೆಗೂ ಕನ್ನಡದಲ್ಲಿ ಪ್ರಕಟಗೊಳ್ಳುವ ಎಲ್ಲ ಮುಖ್ಯ ಪುಸ್ತಕಗಳನ್ನು ನಾವು ಓದುತ್ತಿದ್ದೆವು. ಈಗ ಒಂದು ತಿಂಗಳಿನ ಪುಸ್ತಕಗಳನ್ನೂ ಗಮನಿಸಲು ಆಗುತ್ತಿಲ್ಲ. ತಿಂಗಳಿಗೆ ಕನಿಷ್ಠ 500–600 ಪುಸ್ತಕ ಪ್ರಕಟಗೊಳ್ಳುತ್ತಿವೆ. ಸಣ್ಣ ಪತ್ರಿಕೆಗಳು ಅಭಿರುಚಿ ನಿರ್ಮಾಣ ಮಾಡುತ್ತಿದ್ದವು. ಈಗ ಅಂಥ ಪತ್ರಿಕೆಗಳೂ ಇಲ್ಲ. ಇರುವ ಒಂದೆರಡು ಪತ್ರಿಕೆಗಳೂ ಆ ಕೆಲಸ ಮಾಡುತ್ತಿಲ್ಲ''.

ಸಾಹಿತ್ಯ ಮತ್ತು ಓದಿನ ದಿಕ್ಕು ಬದಲಾಗಿರುವುದಕ್ಕೆ ಇರುವ ಕಾರಣಗಳನ್ನು ಗುರ್ತಿಸುವ ಪ್ರಯತ್ನ ದಿವಾಕರ್ ಅವರ ಮಾತುಗಳಲ್ಲಿತ್ತು. ನವ್ಯದ ದಿನಗಳ ವಸ್ತುನಿಷ್ಠ ವಿಮರ್ಶೆಯ ಬಗ್ಗೆ ಅವರು ಮಾತನಾಡಿದ್ದರ ಎಳೆ ಹಿಡಿದು ಎಚ್‌ಎಸ್‌ಆರ್ ಚರ್ಚೆಯ ಮತ್ತೊಂದು ಆಯಾಮವನ್ನು ನೆನಪಿಸಿಕೊಂಡರು.

''ನಾವು ಒಂದು ಕಾಲದಲ್ಲಿ ನವ್ಯದಿಂದ ಪ್ರಭಾವಿತರಾದವರು. ಈಗ ನಮ್ಮ ಬರವಣಿಗೆಯನ್ನು ನಾವೇ ನೋಡಿಕೊಂಡರೆ, ನವ್ಯದ ಪ್ರಭಾವವನ್ನು ಮೀರಲು ಪ್ರಯತ್ನಿಸಿದ್ದು ಕಾಣಿಸುತ್ತದೆ. ನವ್ಯದಲ್ಲಿ ಕೂಡ ಒಂದು ಬಗೆಯ ಪಾಲಿಟಿಕ್ಸ್ ಇರಲಿಲ್ಲ ಎಂದರೆ ತಪ್ಪಾಗುತ್ತದೆ. ಅದು ಅಡಿಗ ಕೇಂದ್ರಿತವಾಗಿತ್ತೇ? ಅಡಿಗ ಕೇಂದ್ರವನ್ನು ಮೀರಿ ಅದು ಬೆಳೆದಿದ್ದು ಹೇಗೆ? ಬೆಳೆಯಿತಾ? ಕುವೆಂಪು ಅವರು ಕವಿಯಲ್ಲ, ಅವರು ಒಂದು ಕವಿತೆಯನ್ನೂ ಬರೆದಿಲ್ಲ ಎಂದ ವಿಮರ್ಶಕರ ನಡುವೆ ಬೆಳೆದುಬಂದವರು ನಾವು. ಯಾವುದನ್ನು ಸಾಹಿತ್ಯ ಎಂದು ನವ್ಯ ಗುರ್ತಿಸಿತೋ ಅದನ್ನು ನವ್ಯವೇ ಮೀರಿತು. ಕಳೆದ 25–30 ವರ್ಷಗಳ ಸಾಹಿತ್ಯ ನಮ್ಮ ಇಡೀ ಸಮಾಜಕ್ಕೆ ಅಥವಾ ಅನೇಕ ಸಮಯದಾಯಗಳಿಗೆ ಕನ್ನಡಿಯಾಯ್ತು ಎನ್ನುವುದನ್ನು ಮರೆಯುವಂತಿಲ್ಲ. ಆವರೆಗೆ ಸಾಹಿತ್ಯ ಒಂದು ಸಮುದಾಯದ ಅಥವಾ ಕೆಲವು ಸಮುದಾಯಗಳ ಕೇಂದ್ರವಾಗಿತ್ತು. ಹೆಣ್ಣು ತಾನಾಗಿಯೇ ತನ್ನ ಬಗ್ಗೆ ಬರೆಯಬಹುದಾದ ಸನ್ನಿವೇಶ ರೂಪುಗೊಂಡಿತು. ಚಳವಳಿಗಳ ಬಗ್ಗೆ ಕಟುವಾಗಿ ಮಾತನಾಡಿದರೂ ಅವುಗಳ ಒಡಲಿನಿಂದ ಮೂಡಿಬಂದ ಲೇಖಕರನ್ನು ಪಕ್ಕಕ್ಕಿಡುವುದು ಸಾಧ್ಯವಿಲ್ಲ. ಮೊಗಳ್ಳಿ, ನುಗಡೋಣಿ, ನಾಗವೇಣಿ, ರಶೀದ್ ಅವರ ಕಥೆಗಳು ಬರುವುದು ಸಾಧ್ಯವೇ ಇಲ್ಲದಂಥ ಸಾಹಿತ್ಯ–ಸಾಮಾಜಿಕ ಸನ್ನಿವೇಶವೂ ಇತ್ತು''.

ನವ್ಯದ ವಿಮರ್ಶೆಗೊಂದು ಕಣ್ಣುಪಟ್ಟಿ ಇತ್ತು ಎನ್ನುವ ಎಚ್‌ಎಸ್‌ಆರ್ ಮಾತಿಗೆ – ''ನವ್ಯದ ಕಾಲದಲ್ಲೇ ದೇವನೂರರು ಬಂದರು ಎನ್ನುವುದನ್ನು ಮರೆಯುವುದು ಸಾಧ್ಯವಿಲ್ಲ'' ಎಂದರು ದಿವಾಕರ್.

''ದೇವನೂರರು ನವ್ಯದ ಕಾಲದಲ್ಲಿ ಬರೆದರೂ ಅದಕ್ಕಿಂಥ ಭಿನ್ನವಾಗಿ ಬರೆದರು.''

''ಬರೆದರು ನಿಜ. ಅದನ್ನು ನವ್ಯರು ಗುರ್ತಿಸಿದರು. ಅಡಿಗ ಕೇಂದ್ರಿತ ಎನ್ನುವುದು ಭಾಗಶಃ ಅಷ್ಟೇ ನಿಜ. ಇಂಥದು ಎಲ್ಲ ದೇಶ–ಕಾಲದಲ್ಲೂ ಸಂಭವಿಸುವಂತಹದ್ದೇ. ಆದರೆ, ಇದ್ಯಾವುದೂ ಅಂತಿಮಸತ್ಯಗಳಾಗಿ ಉಳಿಯುವುದಿಲ್ಲ ಎನ್ನಿಸುತ್ತದೆ'' ಎಂದರು ದಿವಾಕರ್. ಈ ಮಾತನ್ನು ಆರಂಭಿಸಿದ ಎಚ್‌ಎಸ್‌ಆರ್ ಅವರೇ ಮಾತಿಗೆ ತಾರ್ಕಿಕ ಅಂತ್ಯವನ್ನೂ ನೀಡಿದರು – ''ಅದು ನಿಜ, ನಾವ್ಯಾರೂ ಪರಮಸತ್ಯಗಳನ್ನು ಹೇಳುತ್ತಿಲ್ಲ ಎನ್ನುವುದೇ ನಿಜ.''